ಶ್ರೀ ಕೆ. ಪುಟ್ಟಸ್ವಾಮಿ.—' ಕೂಸು ಹುಟ್ಟುವುದಕ್ಕೆ ಮುಂಚೆಯೇ ಕುಲಾವಿ ಹೋಲಿಸಿದರಂತೆ,' ಅಂದ ಹಾಗೆ ಸರ್ಕಾರದ ಪ್ರೀತಿಯಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—1946 ರಿಂದ ಅಂದರೆ ಸುಮಾರು 16 ವರ್ಷಗಳಿಂದಲೂ ಈ ಕೆಲಸ ಪೂರ್ತಿಯಾಗಲಿಕ್ಕಾಗಲಿಲ್ಲವೆ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಬೇರೆ ವಿಷಯ. ಅದಕ್ಕೆ ಅಂದಾಜು ಹಣ ಒದಗಿಸುವುದು ಪೌರಸಭೆಯವರ ಕರ್ತವ್ಯ. ಪೌರಸಭೆಯವರಿಗೆ ಯಾವಾಗ ಹಣವನ್ನು ಒದಗಿಸಲಿಕ್ಕೆ ಶಕ್ತಿಯಾಗುತ್ತದೋ ಆಗ ಈ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ವಿ. ಗೌಡ.—ಜಮೀನು ಇದಕ್ಕಾಗಿ ಆಕ್ವೈರು ಮಾಡಿಕೊಂಡಮೇಲೆ ಎಷ್ಟು ಕಂಪನ್ಸೇಷನ್ ದುಡ್ಡನ್ನು ಕೊಡಬೇಕೆಂದು ಮುನಿಸಿಪಾಲಿಟಿಯವರನ್ನು ಕೇಳಿದ್ದೀರಿ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಸ್ಕೀಮು ಮಂಜೂರಾಗಿದೆ. ಸ್ಕೀಮಿನಲ್ಲಿ ಹಣವಿದೆ. ಆದರಲ್ಲಿ ಆದಷ್ಟು ಜಮೀನನ್ನು ಕೇಳಿಕೊಂಡಿದ್ದಾರೆ. The Municipality will be asked to make the funds available.

ಶ್ರೀ ಕೆ. ದೇವಯ್ಯ.—ಟ್ರೀಟ್‌ಮೆಂಟ್ ಪ್ಲಾಂಟಿಗಾಗಿ ಎಷ್ಟು ಅಂದಾಜು ಆಗಿದೆ. ಈ ಟ್ರೀಟ್‌ಮೆಂಟ್ ಪ್ಲಾಂಟಿನಿಂದ ಬರೀ ಗ್ಯಾಸ್ ಪ್ರೊಡ್ಯೂಸ್ ಆಗುತ್ತದೋ ಅಥವಾ ಇದು ಬೇರೆ ಸ್ಕೀಮು ಆಗಿದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಒಂದು ಬೇರೆ ಸ್ಕೀಂ. ಇವರಿಂದ ಗ್ಯಾಸ್ ಉತ್ಪತ್ತಿ ಆಗುತ್ತದೆ. ಟ್ರೀಟ್‌ಮೆಂಟ್ ಪ್ಲಾಂಟಿಗೆ ಖರ್ಚು ಆಗುವಷ್ಟು ಇದಕ್ಕಾಗುವುದಿಲ್ಲ. ಅಷ್ಟು ಉಪಯೋಗ ಪಡೆಯುವ ಸ್ಕೀಮು ಹಾಗೆ ಇಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—(ಬಿ) ಪ್ರಶ್ನೆಗೆ ಉತ್ತರವಾಗಿ " The system of underground drainage works can be put into operation " ಎಂದು ಇದೆ. 1½ ವರ್ಷ ಏತಕ್ಕೆ ಬೇಕು?

ಶ್ರೀ ಕೆ. ಪುಟ್ಟಸ್ವಾಮಿ.—ಪ್ಲಾಂಟ್ಸ್ ಬಂದಮೇಲೂ ಕೂಡ ಸಿವಿಲ್ ವರ್ಕ್ಸ್, ಅಪರೇಷನ್ ವರ್ಕ್ಸ್ ಮುಗಿಯಬೇಕು. ಆದ್ದರಿಂದ ಈ ಆಪರೇಷನ್ ವರ್ಕ್ಸ್ ಪುರುವಾಗಬೇಕಾದರೆ 1½ ವರ್ಷಗಳು ಬೇಕು.

ಶ್ರೀ ಟಿ. ಡಿ. ದೇವೇಂದ್ರಪ್ಪ.—Sewage plant ವರ್ಕ್ಸ್‌ನಿಂದ ನೀರು ಗಲೀಜು ಆಗುವುದಿಲ್ಲವೆಂದು ಹೇಗೆ ಹೇಳುತ್ತೀರಿ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಎಲ್ಲಿಯಾದರೂ sewage plant ಇರುವ ಕಡೆ ಹೋಗಿ ಬಂದರೆ ಆಗ ಅರ್ಥವಾಗುತ್ತದೆ.

Sri M. C. BASAPPA.—I request the chair to put the question of Sri Anna Rao Ganamukhi since the Member is absent.

MR. SPEAKER—I have heard the request of Sri Basappa. I shall put the question. But this should not be taken by the Hon'ble Member as a precedent and expect the Chair to put question when any Hon'ble Member is absent.

Submission of Reports to the Government by the District Development Councils with regard to their working.

*Q.—260. Sri ANNA RAO GANAMUKHI (Afzalpur).—

Will the Government be pleased to state :—

(*a*) whether all or any of the District Development Councils have sent the reports of their working to the Government including the consolidated report of the working of the Taluk Boards;

(*b*) if the answer to (*a*) above is in the affirmative, what are the remarks passed or view taken by the Government thereon?

A.—Sri RAMAKRISHNA HEGDE (Minister for Co-operation and Development).—

(*a*) Reports have been received from 17 districts for the year 1960-61.

(*b*) They will be reviewed after receipt of reports from the remaining two districts.

Sri SANJEEVANATH IKALA.—Which are the districts from which answers have not been received?

Sri RAMAKRISHNA HEGDE.—Bangalore and Shimoga.

Sri G. V. GOWDA.—Have the Government fixed any time limit?

Sri RAMAKRISHNA HEGDE.—No time limit is fixed. I am now thinking of fixing a time limit.

Sri M. C. BASAPPA.— If those two districts do not send the reports, what will happen to the review?

Sri RAMAKRISHNA HEGDE.—There is no question of their not sending the reports.

MR. SPEAKER.—It is a hypothetical question.

Sri G. V. GOWDA.—Though the other two districts have not sent the reports, what prevents the Government from making review of the reports already received?

Sri RAMAKRISHNA HEGDE.—Mostly the problems are common to all districts. We think it would be better to review the reports as a whole rather than taking it part by part or district by district.

Sri G. V. GOWDA.—Will not the Government review each district separately.

Sri RAMAKRISHNA HEGDE.—The report of each district will also be reviewed but it will be in the context of the whole State.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಯಾವ ಜಿಲ್ಲೆಯಿಂದ ಇನ್ನೂ ವರದಿ ಬಂದಿಲ್ಲ?

(ಉತ್ತರವಿಲ್ಲ)

ಶ್ರೀ ಟಿ. ಡಿ. ದೇವೇಂದ್ರಪ್ಪ.—17 ಜಿಲ್ಲೆಗಳಿಂದ ವರದಿ ಬಂದಿದೆ. ಇನ್ನುಳಿದ ಎರಡು ಜಿಲ್ಲೆಗಳಿಂದ ವರದಿ ಇನ್ನೂ ಬರಬೇಕು ಎಂಬುದಾಗಿ ಉತ್ತರದಲ್ಲಿ ಹೇಳಿದ್ದಾರೆ. ಆಯಾ ಜಿಲ್ಲೆಗೆ ಸಂಬಂಧಪಟ್ಟ ವರದಿಯನ್ನು ರಿವ್ಯೂ ಮಾಡಿ ಜಿಲ್ಲಾಭಿವೃದ್ಧಿ ಮಂಡಲಿ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ಪರಿಶೀಲಿಸಿ ಅವರಿಗೆ ಡೈರೆಕ್ಷನ್ ಕೊಡುತ್ತೀರೋ ಅಥವಾ ಎಲ್ಲಾ ವರದಿಗಳನ್ನು ಒಟ್ಟಿಗೆ ಸೇರಿಸಿ ಒಂದು ಕಾಂಪ್ರೆಹೆನ್ಸಿವ್ ರಿವ್ಯೂಮಾಡಿ ಹೀಗೆ ಮಾಡಿಲ್ಲ, ಹಾಗೇ ಮಾಡಿಲ್ಲವೆಂದು ಹೇಳುತ್ತೀರೋ?

ಶ್ರೀ ರಾಮಕೃಷ್ಣ ಹೆಗ್ಗಡೆ.— ವರದಿಗಳಲ್ಲಿ ಕೆಲವೊಂದು ವಿಶಿಷ್ಟವಾದ ಸೂಚನೆಗಳು ಇರಬಹುದು. ಆದರೆ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಿಂದಲೂ ಈ ಸಂಸ್ಥೆಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಬಂದರೆ ಚೆನ್ನಾಗಿ ಪರಿಶೀಲಿಸಬಹುದು. ಆದ್ದರಿಂದ ಎಲ್ಲಾ ಜಿಲ್ಲೆಗಳ ವರದಿಗಳನ್ನು ಒಟ್ಟಿಗೆ ಸೇರಿಸಿ ಕೊನೆಗೆ ಕೂಲಂಕಷವಾಗಿ ಪರಿಶೀಲಿಸಿದರೆ ಅದರಿಂದ ಹೆಚ್ಚು ಪ್ರಯೋಜನವಾಗುತ್ತದೆ ಮತ್ತು ಉಪಯುಕ್ತವಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—61-62ನೆಯ ಸಾಲಿನ ವರದಿಗಳು ಬಂದಿವೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬಂದಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—60-61 ನೇ ವರದಿಗಳು 17 ಜಿಲ್ಲೆಗಳಿಂದ ಬಂದಿರುವಾಗ ಅವುಗಳಲ್ಲಿ ಮೊದಲು ಬಂದ ವರದಿಗಳು ಯಾವುವು? ಆ ರೀತಿ ಬಂದಂಥ ವರದಿಗಳ ಬಗ್ಗೆ ಏನಾದರೂ ಕೆಲಸ ಕಾರ್ಯಗಳು ನಡೆದಿವೆಯೋ ಅಥವಾ ಹಾಗೆಯೇ ಕಟ್ಟಿಟ್ಟಿದ್ದಿರೋ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತಾಲ್ಲೂಕು ಬೋರ್ಡ್ ರಚನೆಯಾದುದು 60ನೇ ಇಸವಿ ಆಗಸ್ಟು. ಸುಮಾರು 60-61 ನೆಯ ಇಸವಿಯಲ್ಲಿ 6-8 ತಿಂಗಳ ಅವಧಿ ವರದಿ ಬರಬೇಕಾಗಿತ್ತು. ಆದ್ದರಿಂದ ಎಲ್ಲಾ ಜಿಲ್ಲೆಗಳಿಂದಲೂ ವರದಿ ಬಂದರೆ ಅವುಗಳ ಸಮಸ್ಯೆಯನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಮೊದಲೆ ಬಂದಿರತಕ್ಕ ವರದಿಗಳನ್ನು ಪರಿಶೀಲನೆ ಮಾಡಲಿಲ್ಲ. ಆದರೆ ಕೆಲವೊಂದು ವರದಿಗಳ ಮೇಲೆ ಪ್ರತ್ಯೇಕವಾಗಿ ಯಾವುದಾದರೂ ಸೂಚನೆ ಮಾಡಿದ್ದರೆ ಆಯಾ ಜಿಲ್ಲೆಗೆ ಸಂಬಂಧಪಟ್ಟ ಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—60-61ನೆಯ ಇಸವಿಯ ವರದಿಗಳನ್ನು ಪೂರ್ತಿ ರಿವ್ಯೂ ಮಾಡಲಿಲ್ಲ. 61-62ನೆಯ ಇಸವಿಯ ವರದಿಗಳು ಇನ್ನೂ ಬರಬೇಕಾಗಿವೆ ಎಂದು ಹೇಳಿದ್ದೀರಿ. ಅಂದ ಮೇಲೆ ಜಿಲ್ಲಾಭಿವೃದ್ಧಿ ಮಂಡಲಿಗೆ ತಮ್ಮ ಡೈರೆಕ್ಷನ್ಸ್ ಹೋಗುವುದು ಯಾವಾಗ? ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಎಷ್ಟು ಕಾಲವಾಗುವುದು?

ಶ್ರೀ ರಾಮಕೃಷ್ಣ ಹೆಗ್ಗಡೆ.—60-61ನೆಯ ಇಸವಿಯಲ್ಲಿ ಕೆಲವು ಜಿಲ್ಲೆಗಳಿಂದ ವರದಿಬಂದಿದೆ. ಮೊದಲನೆ ಪ್ರಶ್ನೆಗೆ ಉತ್ತರರೂಪವಾಗಿ ಎಲ್ಲರಿಗೂ ಕಾಲಾವಕಾಶವನ್ನು ನಿಗದಿ ಮಾಡದೆ ಇರುವುದರಿಂದ ಬಹುಶಃ ಈ ರೀತಿ ವಿಳಂಬವಾಗಿದೆ. ಇನ್ನು ಮುಂದೆ ಪ್ರತಿ ವರ್ಷವೂ ಇಂತಹ ತಾರೀಖಿನೊಳಗೇ ಇಂತಹ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಕಡ್ಡಾಯವಾಗಿ ಒಂದು ನಿರ್ಬಂಧವನ್ನು ಡೆಪ್ಯುಟಿ ಕಮಿಷನರಿಗೆ ಹಾಕುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಇಷ್ಟೊಂದು ತಡವಾಗಿ ರಿಪೋರ್ಟ್ ಬರುವುದಕ್ಕೆ ಕಾರಣವೇನು ಎಂದು ಏನಾದರೂ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಅವರನ್ನು ಕೇಳಿದ್ದೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಾರಣಗಳು ಅನೇಕವು ಇವೆ. ಪುನಃ ಪುನಃ ಅಧಿಕಾರಿಗಳು ಬದಲಾವಣೆಯಾಗುವುದು ಒಂದು ಕಾರಣ.

Sri SANJEEVANATH AIKALA.—Does Government propose to lay on the table of the House a copy of the review of these reports of the District Development Councils so as to know the developmental activities of the various Districts?

Sri RAMAKRISHNA HEGDE.—The suggestion of the Hon'ble Member will be taken into consideration.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಎಲ್ಲಾ ಜಿಲ್ಲೆಗಳ ರಿಪೋರ್ಟ್ consider ಮಾಡುವುದರಿಂದ common policy involve ಆಗುತ್ತದೆ. ಆದ್ದರಿಂದ ಒಂದೇಸಾರಿ ರಿವ್ಯೂ ಮಾಡುವುದು ಒಳ್ಳೆಯದು ಎಂದು ಹೇಳಿದಿರಿ. ಹಾಗೆ ಮಾಡಿದ ರಿಪೋರ್ಟನ್ನು ಈ ಸಭೆಯ ಮುಂದೆ ಇಟ್ಟು ಈ ಸಭೆಯ ಅಭಿಪ್ರಾಯ ಪಡೆಯುತ್ತೀರಾ;-ನೀತಿ, ತತ್ವ ಇದರಲ್ಲಿ ಅಡಕವಾಗಿರುವುದರಿಂದ.

ಶ್ರೀ ರಾಮಕೃಷ್ಣ ಹೆಗ್ಗಡೆ. —ಮಾನ್ಯ ಸದಸ್ಯರ ಸೂಚನೆಯನ್ನು ಗಮನಿಸಲಾಗುವುದು.

ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ.—ಅನೇಕ ಕಾರಣಗಳ ಜೊತೆಯಲ್ಲಿ ಪದೇ ಪದೇ ಅಧಿಕಾರಿಗಳು ಬದಲಾವಣೆ ಯಾಗುವುದು ಒಂದು ಕಾರಣ ಎಂದು ಹೇಳಿದಿರಿ. ಇದಕ್ಕೆ ಸರ್ಕಾರದವರು ಜವಾಬ್ದಾರರೋ, ಅಥವಾ ಸಾರ್ವಜನಿಕರು ಜವಾಬ್ದಾರರೋ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾರ ಜವಾಬ್ದಾರಿ ಎಷ್ಟು ಮಟ್ಟಿಗೆ ಎಂದು ಸರಿಯಾಗಿ ಇದನ್ನು ವಿಭಾಗ ಮಾಡಿ ಹಂಚುವುದಕ್ಕೆ ಕಷ್ಟವಾಗುತ್ತದೆ. ಬಹುಶಃ ಇಬ್ಬರದೂ ಜವಾಬ್ದಾರಿ ಇದೆ.

ಶ್ರೀ ಇ. ನಾರಾಯಣ ಗೌಡ.—ಎರಡು ಜಿಲ್ಲೆಗಳಿಂದ ಇನ್ನೂ ವರದಿ ಬಂದಿಲ್ಲ. ಈಗಲಾದರೂ ಈ ವರದಿ ತರಿಸುವುದಕ್ಕೆ ಡೈರೆಕ್ಷನ್ ಕೊಟ್ಟಿದ್ದೀರಾ ; ಯಾವತ್ತು ಡೈರೆಕ್ಷನ್ ಕಳುಹಿಸಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಡೈರೆಕ್ಷನ್ ಬಹಳ ಕಟ್ಟುನಿಟ್ಟಾಗಿ ಹೋಗಿದೆ.

Sri D. PARAMESWARAPPA.— Does Government know the reason for this delay ?

Sri RAMAKRISHNA HEGDE.—I have already answered that.

ಶ್ರೀ ಜಿ. ವಿ. ಗೌಡ.—ಆಯಾಯ ವರದಿಗಳು ಬಂದ ಹಾಗೆ ತಾವು ರದ್ದು ಮಾಡಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಕಳುಹಿಸಿದ್ದಿದ್ದರೆ ಆವರು ಬಹುಶಃ ಮುಂದಿನ ವರ್ಷದ ರಿಪೋರ್ಟಿನಲ್ಲಿ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತ ಇರಲಿಲ್ಲವೇ ?

ಶ್ರೀರಾಮಕೃಷ್ಣ ಹೆಗ್ಗಡೆ.—ಆದನ್ನು ನಾನು ಒಪ್ಪುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ತಮ್ಮ ಮೀಟಿಂಗ್‌ಗಳನ್ನು ಈ ಅಸೆಂಬ್ಲಿ ಅಥವಾ ಕೌನ್ಸಿಲ್ ಸೆಷನ್ ಇರುವಾಗಲೇ ಮಾಡುತ್ತಾ ಇದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

(No answer)

ಶ್ರೀ ಕೆ.ಸಿ.ರೇವಣ್ಣಸಿದ್ದಪ್ಪ.—ಕೆಲವರನ್ನು transfer ಮಾಡುವುದು, ಕೆಲವರ transfer cancel ಮಾಡುವುದು ಇದರಲ್ಲಿ ಸರ್ಕಾರವೇ ನೇರ ಕೈ ಹಾಕುವುದರಿಂದ ಈ ರಿಪೋರ್ಟು ನಮಗೆ ಬರುವುದು ನಿಧಾನವಾಗುತ್ತಾ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಅನಕಾಶ ಕೊಟ್ಟರೆ ತಮ್ಮ ಚೇಂಬರ್‌ಗೆ ಬಂದು ಲಿಸ್ಟ್ ಕೊಡುತ್ತೇನೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವಶ್ಯಕವಾಗಿ ಪರಿಶೀಲಿಸುತ್ತೇನೆ.

Sri SANJEEVANATH IKALA.—Did Government receive any representation from any of the District Development Councils that a non-official should be the president of the Council and not the Deputy Commissioner ?

Sri RAMAKRISHNA HEGDE.—I do not think such a recommendation has been made. But this matter is under the active consideration of Government.

ಶ್ರೀಮತಿ ಸುಶೀಲಾಬಾಯ್ ಷಾ.—ಮೊದಲಿನಿಂದಲೂ ಜಿಲ್ಲಾ ಬೋರ್ಡು ಇತ್ತು. ಅದು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಾ ಇತ್ತು. ಈಗ ತಾಲ್ಲೂಕು ಬೋರ್ಡು ಆಗಿದೆ. ಇದರಲ್ಲೂ ಕೂಡ ಅಭಿವೃದ್ಧಿ ಕೆಲಸಗಳು ಜಾಸ್ತಿಯಾಗಿದೆಯಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಅಭಿಪ್ರಾಯದ ಮಾತು.

Sri T. MADAIAH GOWDA.—Are these reports required to be discussed before the District Development Councils before they are sent to Government ?

Sri RAMAKRISHNA HEGDE.—Yes.

ಶ್ರೀ ಎಸ್. ಸುಬ್ಬಯ್ಯ ನಾಯಕ್.—17 ಜಿಲ್ಲೆಗಳಿಂದ ವರದಿ ಬಂದಿದೆ. ಎರಡು ಜಿಲ್ಲೆಗಳಿಂದ ಬಾಕಿ ಬರುವುದು ಇದೆ ಎಂದು ಹೇಳಿದ್ದೀರಿ. ಕೇವಲ ಎರಡು ಜಿಲ್ಲೆಗಳದು ಮಾತ್ರ ಬರಬೇಕಾಗಿರುವುದರಿಂದ ಈಗಲೇ ಏಕೆ ತೀರ್ಮಾನ ಕೈಕೊಳ್ಳಬಾರದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತೀರ್ಮಾನ ತೆಗೆದು ಕೊಳ್ಳುವುದು ಏನೂ ಇಲ್ಲ. ರಿಪೋರ್ಟು ಕಳುಹಿಸುವುದರ ಉದ್ದೇಶ ಅಲ್ಲಿ ಚಟುವಟಿಕೆ ಯಾವ ರೀತಿ ಪಡೆದಿವೆ ಎಂಬ ಒಂದು ಚಿತ್ರ ನಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆಯಿಂದ ವರದಿ ಬಂದಿದೆಯೇ ?

MR. SPEAKER.—Does that question really arise ?

ಶ್ರೀ ಎಸ್. ಗೋಪಾಲಗೌಡ.—ಈಚೆಗೆ ಮಾನ್ಯ ಮಂತ್ರಿಗಳು ಶಿವಮೊಗ್ಗ ಜಿಲ್ಲಾ ಕೌನ್ಸಿಲ್‌ಗೆ ಭೇಟಿ ಕೊಟ್ಟಿದ್ದರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು.

ಶ್ರೀ ಎಸ್. ಗೋಪಾಲ ಗೌಡ.—ಆ ಸಭೆಯನ್ನು ಯಾವ ಉದ್ದೇಶಕ್ಕೆ ಕರೆಯಲಾಗಿತ್ತು ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಆ ಜಿಲ್ಲೆಯಲ್ಲಿ ಪಂಚಾಯ್ತಿ ರಾಜ್ಯಸಂಸ್ಥೆ ಮತ್ತು ಇನ್ನಿತರ ಡೆವಲಪ್ ಮೆಂಟ್ ಕೆಲಸ ಯಾವ ರೀತಿ ನಡೆದಿದೆ ಮತ್ತು ಆಫೀಸರ್ಸ್ ಮತ್ತು ಸಾರ್ವಜನಿಕರ ಮುಂದಿರತಕ್ಕ ಅಭಿಪ್ರಾಯ ತಿಳಿದುಕೊಳ್ಳಲಿಕ್ಕೆ ಕರೆಯಲಾಗಿತ್ತು.

ಶ್ರೀ ಎಸ್. ಡಿ. ಸಾಮ್ರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಬರದಂತಹ ಗ್ರಾಮಸೇವಕರನ್ನು ಹಾಕಿ ಕೆಲಸ ನಡೆಯದೆ ನಿಂತುಹೋಗಿದೆ. ಅಂತಹ ವರನ್ನು ಅಲ್ಲಿಗೆ ನರ್ಗಮಾಡುವುದಕ್ಕಿಂತ ತುಳು ಬರುವಂತಹವರು, ಎಸ್. ಎಸ್. ಎಲ್. ಸಿ. ಕ್ವಾಲಿಫಿಕೇಷ್ನ ಇದ್ದವರು ಯಾರಾದರೂ ಇದ್ದರೆ ಅವರನ್ನು ಅಲ್ಲಿಗೆ ನೇಮಕ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತುಳು ಬಂದಂಥ ಮತ್ತು ಇನ್ನಿತರ ಕ್ವಾಲಿಫಿಕೇಷ್ನ ಇದ್ದಂಥ ಯುವಕರು ಮುಂದೆ ಬಂದರೆ ಅವರನ್ನು ಗ್ರಾಮಸೇವಕರನ್ನಾಗಿ ಮತ್ತು ಇನ್ನಿತರ ಆಫೀಸರುಗಳನ್ನಾಗಿ ತೆಗೆದುಕೊಳ್ಳಲಿಕ್ಕೆ ಸರ್ಕಾರ ಯಾವಾಗಲೂ ಸಿದ್ಧವಾಗಿದೆ. ಅಂಥವರು ಸಾಕಾದಷ್ಟು ಸಂಖ್ಯೆಯಲ್ಲಿ ಮುಂದೆ ಬರದಿದ್ದರೆ ಸರ್ಕಾರದ ತಪ್ಪಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತುಳುಗೆ ಯಾವ ಲಿಪಿ ಇದೆ?

Sri RAMAKRISHNA HEGDE.—I am not a Linguist, but as far as I know Tulu has no script; it is only a dialect.

ಶ್ರೀ ಜಿ. ವಿ. ಗೌಡ.—ಜಿಲ್ಲಾಭಿವೃದ್ಧಿ ಮಂಡಲಿ ಇದುವರೆಗೂ ಯಾವ ರೀತಿ ಕೆಲಸಮಾಡುತ್ತಾ ಇದೆ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲ ಎಂದರೆ ಅದು ನಿಜ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ನಿಜವಲ್ಲ. ಅದರ ಚಟುವಟಿಕೆಯನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಬೇರೆ ಬೇರೆ ಮಾರ್ಗಗಳು ಇವೆ.

2 P.M.

ಶ್ರೀ ಗೋಪಾಲ ಸಾಲೆನ್ನ.—ತುಳು ಸ್ಕ್ರಿಪ್ಟ್ ಇಲ್ಲ ವೆಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆ ಮಂತ್ರಿಗಳಿಗೆ ಸಂಬಂಧಪಟ್ಟಿಲ್ಲದಿರುವುದರಿಂದ ಅವರಿಗೆ ಗೊತ್ತಿಲ್ಲ. ಅಲ್ಲಿ ಸ್ಕ್ರಿಪ್ಟ್ ಉಂಟು.

MR. SPEAKER (Addressing Sri Gopal Salenna).—Will you give a copy of the script to the Hon'ble Minister ?

ಶ್ರೀ ಗೋಪಾಲ ಸಾಲೆನ್ನ.—ತುಳು ಮಾತನಾಡಲು ಬಾರದಿರುವ ಗ್ರಾಮಸುಧಾರಕರನ್ನು ತುಳು ಮಾತನಾಡುವವರಿರುವ ಹಳ್ಳಿಗಳಿಗೆ ಕಳುಹಿಸುವುದರಿಂದ ಅವರ ಅಭಿಪ್ರಾಯ ಜನರಿಂದ ತಿಳಿದು ಜನರಲ್ಲಿ ತಿಳುವಳಿಕೆಯನ್ನುಂಟು ಮಾಡಲು ಕಷ್ಟವಾಗುತ್ತದೆ.

MR. SPEAKER.—Question hour is over. We have spent 61 minutes on question hour to-day.

Members' Representation.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಹೋದ ಅಧಿವೇಶನದಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ಅದೇ ಪ್ರಶ್ನೆಗಳನ್ನು ಈ ಅಧಿವೇಶನದಲ್ಲಿ ಮತ್ತೆ ಬರೆದುಕೊಟ್ಟೆ. ಆದರೂ ಉತ್ತರ ಬಂದಿಲ್ಲ. ಜಾಗ್ರತೆ ಉತ್ತರ ಬರುವಂತೆ ವ್ಯವಸ್ಥೆ ಮಾಡಬೇಕೆಂದು ಸೂಚಿಸಬಯಸುತ್ತೇನೆ.

MR. SPEAKER.—I will look into it.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೇ, ಈ ಸಭೆಯೊಳಗೆ ಮತ್ತು ಹೊರಗೆ ಈ ದೇಶದ ತೀವ್ರವಾದ ಗಮನವನ್ನು ಸೆಳೆದಿರುವ ವಿಷಯ ಯಾವುದೆಂದರೆ ಪಾನನಿರೋಧ. ಅದರ ಬಗ್ಗೆ ಈಗಾಗಲೇ ಆಡಳಿತ ಪಕ್ಷದವರು ಚರ್ಚೆಮಾಡುತ್ತಿದ್ದಾರೆ. ಈ ಸಭೆ ಸೇರಿರುವ ಈ ಸಮಯದಲ್ಲಿ ಇಂಥ ಒಂದು ತೀವ್ರವಾದ ವಿಚಾರದ ಬಗ್ಗೆ ಈ ಸಭೆಯ ಅಭಿಪ್ರಾಯ ವೇನೆಂದು ತಿಳಿದುಕೊಳ್ಳುವುದಕ್ಕೆ ಒಂದೆರಡು ದಿವಸ ಈ ಸಭೆಗೆ ಅವಕಾಶ ಕೊಟ್ಟು ಅಭಿಪ್ರಾಯ ತಿಳಿದುಕೊಳ್ಳುವುದು ಸೂಕ್ತ. ಇದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

MR. SPEAKER.—I will take it to the Business Advisory Committee, consult the Government and see.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಈ ಅಧಿವೇಶನ ಎಷ್ಟು ದಿವಸ ನಡೆಯುತ್ತದೆಂದು ಸರಿಯಾಗಿ ಹೇಳಿದರೆ ನಾವು ತಕ್ಕ ಸಿದ್ಧತೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

MR. SPEAKER.—Having regard to the agenda that we have and having regard to the pace at which we are going, it was thought, according to the work schedule or the time allotment by the Business Advisory Committee, that much more than what we did yesterday would have been over. Perhaps a little extension is necessary. It may be that we will have to sit till day-after-to-morrow. We will consider it in the Business Advisory Committee.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮೊದಲು ಒಪ್ಪಿಸಿದ ಕಾರ್ಯಕ್ರಮ ಪಟ್ಟಿ ಪ್ರಕಾರ 15 ನೆಯ ತಾರೀಖಿನವರೆಗೆ ಈ ಸಭೆ ನಡೆಯುವುದೆಂದು ಭಾವಿಸಿದ್ದೆವು. ಆನಂತರ 11 ನೆಯ ತಾರೀಖು ಬರಮಾಸ್ತಾಗಬಹುದೆಂಬ ಸೂಚನೆ ಬಂತು. ಮತ್ತೆ 13 ನೆಯ ತಾರೀಖಿನವರೆಗೆ ಮುಂದುವರಿಸಲಾಗಿದೆ. ಖಚಿತವಾಗಿ ಹೇಳಿದರೆ ಒಳ್ಳೆಯದು.